
# ಮನುಷ್ಯನೆಂಬ ವಿಸ್ಮಯ

ಮನುಷ್ಯನೆಂದರೇನು? ಈ ಪ್ರಶ್ನೆಗೆ ಸೂತ್ರ ರೂಪದಲ್ಲಿ ಸಂಕ್ಷಿಪ್ತವಾಗಿ ಉತ್ತರಿಸುವುದು ನಿಜಕ್ಕೂ ಕಷ್ಟ. ಮನುಷ್ಯನೆಂದರೆ ಕ್ರಿಮಿ, ಕೀಟ, ಪಶು, ಪಕ್ಷಿಗಳಿಗಿಂತ ಆಕೃತಿಯಲ್ಲಿ ಅಥವಾ ಸ್ವಭಾವದಲ್ಲಿ ಭಿನ್ನನೆನ್ನಿಸಿಕೊಳ್ಳುವ ಜೀವಿಯೆಂದೋ, ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ಅವೆಲ್ಲವುಗಳಿಗಿಂತ ಎತ್ತರದಲ್ಲಿರುವ ಪ್ರಾಣಿಯೆಂದೋ ಹೇಳಿದರೆ ಮನುಷ್ಯನ ಬಗೆಗೆ ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಮನುಷ್ಯನನ್ನು 'ಮನೋದೇಹಿ ಜೀವಿ' ಎಂದು ಸ್ಥೂಲವಾಗಿ ವ್ಯಾಖ್ಯಾನಿಸಬಹುದಾದರೂ, ಈ ವ್ಯಾಖ್ಯಾನದ ಚೌಕಟ್ಟಿನಲ್ಲಿ ಮನುಷ್ಯನ ಎಲ್ಲ ಲಕ್ಷಣಗಳನ್ನೂ ಸೇರಿಸಲು ಸಾಧ್ಯವಾಗುವುದಿಲ್ಲ. ಮನುಷ್ಯ ಮನುಷ್ಯರಲ್ಲಿರುವಷ್ಟು ಭಿನ್ನತೆ ಇತರ ಯಾವುದೇ ಜೀವಿಗಳ ಗುಂಪುಗಳಲ್ಲಿನ ಸದಸ್ಯರಲ್ಲಿ ಕಾಣಲಾರೆವು. ಇದು ಮಾತ್ರವಲ್ಲ; ಒಬ್ಬನೇ ವ್ಯಕ್ತಿ ಕಾಲದಿಂದ ಕಾಲಕ್ಕೆ, ಮಾನಸಿಕವಾಗಿ, ಬೌದ್ಧಿಕವಾಗಿ ತನ್ನ ಚಹರೆಯನ್ನು ಬದಲಾಯಿಸಿಕೊಳ್ಳುತ್ತಿರುತ್ತಾನೆ; ಸಂದರ್ಭ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಅವನ ಚಾಕ ಚಕ್ಯತೆಯಿಂದಾಗಿ, ಆತನ 'ನಿಜರೂಪ'ವನ್ನು ಪತ್ತೆಮಾಡುವುದು ಕಷ್ಟ ಸಾಧ್ಯವಾಗುತ್ತದೆ. ಮಾನವನ ಹೊರತಾಗಿ, ಸೃಷ್ಟಿಯಲ್ಲಿನ ಯಾವುದೇ ಜೀವಿಗಳನ್ನಾದರೂ, ಅವುಗಳ ಆಕೃತಿ, ಸ್ವಭಾವ ಮುಂತಾದವುಗಳಿಗನುಗುಣವಾಗಿ ವರ್ಣಿಸಬಹುದು. ಉದಾಹರಣೆಗೆ– ಹಸಿವಾದಾಗ ಇತರ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವ, ಆತ್ಮರಕ್ಷಣೆಗಾಗಿ ಕ್ರೌರ್ಯವನ್ನು ಪ್ರದರ್ಶಿಸುವ ಬೆಕ್ಕಿನ ಜಾತಿಯ ಪ್ರಾಣಿ– ಎಂದೊಡನೇ 'ಹುಲಿ' ಎಂದು ಸುಲಭವಾಗಿ ಹೇಳಬಹುದು. ಆದರೆ ಇದೇ ರೀತಿ ಮನುಷ್ಯನ ರೂಪ ಸ್ವಭಾವಗಳನ್ನು ಸಾಧಾರಣೀಕರಣ ಮಾಡಲಾಗುವುದಿಲ್ಲ, 'ಮನುಜ ಕುಲವೊಂದೊಬ್ಬ ನಿನ್ನೊಬ್ಬನಂತಿಲ್ಲ. ತನುವಂಗಗಳೊಳೊಂದು, ರೂಪ ಗುಣ ಬೇರೆ, ಮನದೊಳೊಬ್ಬೊಬ್ಬನೊಂದೊಂದು' ಎನ್ನುತ್ತಾರೆ ಡಿ.ವಿ.ಜಿ.

ದೈಹಿಕ ಶಕ್ತಿಯೊಂದನ್ನೇ ಗಮನಿಸಿದಾಗ, ಮನುಷ್ಯ ಸೃಷ್ಟಿಯಲ್ಲಿನ ಅನೇಕ ಜೀವಿಗಳಿಗಿಂತ ದುರ್ಬಲ. ಗುಣ, ಸ್ವಭಾವಗಳಲ್ಲೂ ಮನುಷ್ಯ ಅನೇಕ ಜೀವಿಗಳಿಗಿಂತ ಕಳಪೆಯೇ. ಇರುವೆಯಂಥ ಕೀಟದಲ್ಲಿರುವ ಕಾರ್ಯ ತತ್ಪರತೆಯಾಗಲೀ, ಕತ್ತೆ, ಕುದುರೆ, ಎತ್ತು– ಇತ್ಯಾದಿ ಪ್ರಾಣಿಗಳಲ್ಲಿನ ಕಷ್ಟ ಸಹಿಷ್ಣುತೆಯಾಗಲೀ ಮೂಲತಃ ಮನುಷ್ಯನಲ್ಲಿಲ್ಲ. ಹುಲಿ, ಸಿಂಹ, ಆನೆ ಮುಂತಾದ ಪ್ರಾಣಿಗಳಲ್ಲಿನ ದೇಹಬಲ ಆತನಿಗಿಲ್ಲವೆಂದು ಹೇಳಬೇಕಾಗಿಲ್ಲವಷ್ಟೆ? ಕಾರ್ಯತತ್ಪರತೆ, ಕಷ್ಟ ಸಹಿಷ್ಣುತೆ, ವಿಶೇಷ ಶಾರೀರಿಕ ಶಕ್ತಿ– ಇಂಥವೆಲ್ಲ ಮನುಷ್ಯನಲ್ಲಿ ಕಾಣಿಸಿಕೊಂಡಿದ್ದರೆ, ಅವು ಪ್ರಜ್ಞಾಪೂರ್ವಕ ಪ್ರಯತ್ನದಿಂದಾಗಿಯೇ ಹೊರತು, ನಿಸರ್ಗದತ್ತವಾಗಿ ಬಂದವುಗಳಲ್ಲ. ಮನುಷ್ಯ ಜೀವಿಗಳಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಣ ವೈದೃಶ್ಯವೂ ಅಚ್ಚರಿ ಹುಟ್ಟಿಸುವಂಥದು, ಆದರ್ಶ ಮಾನವನೆನ್ನಿಸಿದ ರಾಮನಿದ್ದಾಗಲೇ ಲಂಪಟನಾಗಿದ್ದ ರಾವಣನೂ ಇದ್ದ; ಧರ್ಮರಾಯನ ಎದುರಿನಲ್ಲೇ ದುರ್ಯೋಧನನೂ ಇದ್ದ. ಮನುಷ್ಯ ದೇವನೂ ಆಗಬಲ್ಲ, ಧೂಳಿನ ಕಣವೂ ಆಗಬಲ್ಲ, ಎತ್ತರಕ್ಕೂ ಏರಬಲ್ಲ, ಪಾತಾಳಕ್ಕೂ ಕುಸಿಯಬಲ್ಲ– ಎಂಬ ಸತ್ಯವನ್ನು ಮನುಷ್ಯ ಲೋಕದ ಇತಿಹಾಸ ಸ್ಪಷ್ಟಪಡಿಸುತ್ತದೆ.



ಒಟ್ಟಿನಲ್ಲಿ ಮನುಷ್ಯ ಯಾವುದೇ ವ್ಯಾಖ್ಯೆಗೆ ಅತೀತ. ಆದಾಗ್ಯೂ ಮಾನುಷ ಸ್ವಭಾವವನ್ನು ದೃಷ್ಟಿಯಲ್ಲಿರಿಸಿಕೊಂಡು, ಮನುಷ್ಯನನ್ನು ವರ್ಗೀಕರಿಸಿ, ವ್ಯಾಖ್ಯಾನಿಸುವ ಪ್ರಯತ್ನ ನಡೆಯುತ್ತಲೇ ಇದೆ. ಭರ್ತೃಹರಿ ಎಂಬ ಭಾರತೀಯ ಚಿಂತಕ ಹೇಳುತ್ತಾನೆ:

ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯ ಯೇ
ಸಾಮಾನ್ಯಾಸ್ತು ಪರಾರ್ಥಮುದ್ಯ ಮಭೃತಃಸ್ವಾರ್ಥಾ ವಿರೋಧೇನ ಯೇ।
ತೇಮೀ ಮಾನುಷ ರಾಕ್ಷಸಾಃ ಪರಹಿತಂ ಸ್ವಾರ್ಥಾಯ ನಿಘ್ನಂತಿ ಯೇ
ಯೇ ತು ಘ್ನಂತಿ ನಿರರ್ಥಕಂ ಪರಹಿತಂ ತೇ ಕೇ ನ ಜಾನೀಮಹೇ॥

ಯಾರು ಸ್ವಾರ್ಥವನ್ನು ಬಿಟ್ಟು ಪರಹಿತವನ್ನು ಸಾಧಿಸುವರೋ ಅವರು ಸಜ್ಜನರು (ಉತ್ತಮರು); ತಮ್ಮ ಹಿತಕ್ಕೆ ತೊಂದರೆಯಾಗದಂತೆ ಇನ್ನೊಬ್ಬರ ಹಿತಸಾಧನೆ ಮಾಡುವವರು ಸಾಮಾನ್ಯರು (ಮಧ್ಯಮರು) ತಮ್ಮ ಹಿತಕ್ಕಾಗಿ ಇತರರ ಹಿತವನ್ನು ನಾಶಮಾಡುವವರು ರಾಕ್ಷಸರು (ಅಧಮರು). ನಿರರ್ಥಕವಾಗಿ ಪರರ ಹಿತವನ್ನು ಹಾಳುಮಾಡುವವರನ್ನು ಏನೆಂದು ಕರೆಯಬೇಕೋ ತಿಳಿಯದು. ಇದು ಭರ್ತೃಹರಿ ಮಾಡುವ ಮನುಷ್ಯರ ವರ್ಗೀಕರಣ, ಕೊನೆಯ ವರ್ಗದವರನ್ನು 'ಅಧಮಾಧಮರು' ಎನ್ನಬಹುದೇ?

■ ವೈನತೇಯ

# ಮಾತೇ ಮುತ್ತು

★ ಸಾಲ ಕೊಟ್ಟವನು ಯಜಮಾನನಿಗಿಂತ ಕೆಟ್ಟವನು. ಯಜಮಾನ ಕೇವಲ ನಮ್ಮ ಮೇಲೆ ಅಧಿಕಾರ ಹೊಂದಿದ್ದರೆ, ಸಾಲ ಕೊಟ್ಟವನು ನಮ್ಮ ಅಭಿಮಾನದ ಮೇಲೂ ಅಧಿಕಾರ ಹೊಂದಿದ್ದಾನೆ.
-ವಿಕ್ಟರ್ ಹ್ಯೂಗೋ

★ ನಾನು ಸಾಯಬಹುದು, ನೀನೂ ಸಾಯಬಹುದು. ಎಲ್ಲರೂ ಸಾಯುವವರೇ. ಅದೇ ರೀತಿ ಈ ಜಗತ್ತೇ ಒಂದು ದಿನ ನಾಶವಾಗಬಹುದು. ನಾಶವಾಗುವ ಕಾಲ ಬಂದಾಗ ನಾಶವಾಗಲಿ... ಅಲ್ಲಿಯತನಕ ಸಂತೋಷದಿಂದ ಜೀವಿಸುವುದು ನಮ್ಮ ಧರ್ಮ.
-ವೈಕಂ ಮಹಮದ್ ಬಷೀರ್

★ ಸಾವಿಗಿಂತ ಸಾವಿನ ಭಯವೇ ಹೆಚ್ಚು ಭಯಾನಕ.
-ಪಬ್ಲಿಯಸ್ ಸೈರಸ್

★ ಸಾವು ಬೆಟ್ಟಕ್ಕಿಂತ ದೊಡ್ಡದೂ ಹೌದು, ಕೂದಲಿಗಿಂತ ಸಣ್ಣದೂ ಹೌದು.
-ಜಪಾನಿ ಗಾದೆ

★ ಸಾಯಲಾಗಲಿ, ಮದುವೆ ಮಾಡಿಕೊಳ್ಳಲಾಗಲಿ ಕಾಲ ಮೀರಿತು ಎನ್ನುವುದಿಲ್ಲ.
-ಯಹೂದಿ ಗಾದೆ

★ ಯಾವ ಸಾಹಿತ್ಯವೂ ತಾನು ಹುಟ್ಟಿದ ಕಾಲ, ದೇಶದ ಪ್ರಯೋಜನಕ್ಕೆ ಬಾರದೆ ಎಲ್ಲ ಕಾಲ, ಎಲ್ಲ ದೇಶದ ಸಾಹಿತ್ಯ ಆಗುವುದಿಲ್ಲ.
-ಮುಳಿಯ ತಿಮ್ಮಪ್ಪಯ್ಯ

★ ಸಾಹಿತ್ಯವು ಉಪದೇಶ ಮಾಡುವುದಿಲ್ಲ; ಉಪದೇಶ ಆಗುವಂತೆ ಮಾಡುತ್ತದೆ.
-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗಲಾರದು.
-ಶಿವರಾಮ ಕಾರಂತ

★ ಗುಲಾಮರಿಗೆ ತಮ್ಮ ಗುಲಾಮಗಿರಿಯ ಬಗೆಗೆ ಅರಿವು ಮೂಡಿಸುವಂತಹ ಶಿಕ್ಷಣವನ್ನು ಮಾತ್ರ ನಿಜವಾದ ಶಿಕ್ಷಣ ಎನ್ನಲು ಸಾಧ್ಯ.
-ಬಿ.ಆರ್.ಅಂಬೇಡ್ಕರ್

★ ಇತರರ ಸುಖವನ್ನು ಬಯಸುವುದೇ ನಾವು ಸುಖವನ್ನು ಪಡೆಯುವುದಕ್ಕಿರುವ ಸುಲಭ ಮಾರ್ಗ.
-ಸ್ವಾಮಿ ವಿವೇಕಾನಂದ

★ ಯಾರು ನೀತಿಯಿಂದ ಬದುಕುತ್ತಾರೋ, ಶುದ್ಧ ಮನಸ್ಸಿನಿಂದ ಕೆಲಸ ಮಾಡುತ್ತಾರೋ ಅವರೊಂದಿಗೆ ಕುಳಿತು ಊಟ ಮಾಡುವುದರಿಂದ ನಾನು ಧನ್ಯ.
-ಜ್ಯೋತಿಬಾ ಫುಲೆ

★ ಮೋಸ ಮಾಡುವುದು ಗಿಡಗಳಿಗೆ ಗೊತ್ತೇ ಇಲ್ಲ. ಮಾನವನಿಂದಲೇ ಅವು ಮೋಸ ಹೋಗುವುದುಂಟು.
-ಚೇರ್ಕಾಡಿ ರಾಮಚಂದ್ರರಾಯ

★ ಸತ್ಕಾರ್ಯದಲ್ಲಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಿದರೆ ಸಾವಿನ ನೋವು, ಭಯ ಕಡಿಮೆ ಆಗುತ್ತದೆ.
-ಫ್ರಾನ್ಸಿಸ್ ಬೇಕನ್